ಓಂ ಶಾಂತಿ, ಬಾಪ್ ದಾದಾ,  ಅವ್ಯಕ್ತ ಮುರಳಿ 19-07-1969

**(ओम शान्ति, बापदादा. अव्यक्त मुरली 19-07-1969)**

*ಬಿಂದು (ಝೀರೋ) ಮತ್ತು ಮಹಾನಾಯಕ (ಹೀರೋ) ಆಗಿರಿ.* **(ज़ीरो और हीरो बनो)**

ಇಂದು ಏಕೆ ಕರೆಯಲಾಗಿದೆ? (ಬಲ ತುಂಬಲು) ಯಾವ ಮಾತಿನ ನಿರ್ಬಲತೆಯಿದೆ ಎಂದು ತಿಳಿಯುತ್ತೀರಿ? ವಿಶೇಷ ಯಾವ ಮಾತಿನಲ್ಲಿ ಬಲವನ್ನು ತುಂಬಿಸಬೇಕು? ಸೇವೆಯಲ್ಲಿಯೂ ಬಲ ಹೇಗೆ ತುಂಬುವುದು? ತಮ್ಮಲ್ಲಿ ಎಷ್ಟು ಬಲ ತುಂಬಿದೆ ಅದನ್ನು ಮಾತ್ರ ನೋಡಿಕೊಳ್ಳಬೇಕು. ತಮ್ಮೆಲ್ಲರ ಹೆಸರೇ ಆಗಿದೆ ಶಿವಶಕ್ತಿ. ಹಾಗಾದರೆ ಶಕ್ತಿಯರಲ್ಲಿ ಶಕ್ತಿ ಇದ್ದೇ ಇದೆಯೋ ಅಥವಾ ಶಕ್ತಿಸ್ವರೂಪರಾಗುತ್ತಿದ್ದೀರೋ?ಬಾಪ್ ದಾದಾರವರು ಸೃಷ್ಟಿಯ ಶೃಂಗಾರ ಮಾಡಲು ಯಾವ ಆಭರಣ ಸಿದ್ಧವಾಗಿದೆ ಎಂಬುದನ್ನು ನೋಡಲು ಬಂದಿದ್ದಾರೆ. ಈಗ ಆಭರಣಗಳು ಸಿದ್ಧವಾಗಿವೆ.ಆದರೆ ತಯಾರಾಗಿರುವಂತಹವುಗಳನ್ನು ಪಾಲಿಶ್ ಮಾಡಬೇಕಾಗುತ್ತದೆ. ಎಲ್ಲರಿಗೂ ಅತೀ ಹೆಚ್ಚು ಅವ್ಯಕ್ತ ಸ್ಥಿತಿಯಲ್ಲಿರಲು ವಿಶೇಷ ಸಮಯ ಕೊಡಬೇಕು, ಇದೇ ಪಾಲಿಶ್ ಆಗಿದೆ. ಅವ್ಯಕ್ತ ಸ್ಥಿತಿಯ ಪಾಲಿಶ್ ಉಳಿದಿದೆ. ಪರಸ್ಪರರು ಮಾತನಾಡುವಾಗ ಆತ್ಮರೂಪದಲ್ಲಿ ನೋಡಿ, ಶರೀರದಲ್ಲಿರುತ್ತಿದ್ದರೂ ಆತ್ಮನನ್ನು ನೋಡಿ, ಇದು ಮೊದಲ ಪಾಠ ವಾಗಿದೆ ಇದರದೇ ಆವಶ್ಯಕತೆಯಿದೆ. ಏನೆಲ್ಲಾ ಧಾರಣೆಗಳನ್ನು ಕೇಳಿದ್ದೀರೋ ಅವೆಲ್ಲವುಗಳನ್ನು ಜೀವನದಲ್ಲಿ ತರಲು ಇದೇ ಮೊದಲ ಪಾಠವನ್ನು ಪಕ್ಕಾ ಮಾಡಿಕೊಳ್ಳಬೇಕು. ಈ ಆತ್ಮಿಕ ದೃಷ್ಟಿಯ ಸ್ಥಿತಿ ಪ್ರಯೋಗದಲ್ಲಿ ಕಡಿಮೆ ಇರುತ್ತದೆ. ಸೇವೆಯಲ್ಲಿ ಸಫಲತೆ ಹೆಚ್ಚು ಸಿಗಲು ಆತ್ಮಸ್ಥಿತಿಯಲ್ಲಿದ್ದು ಸೇವೆ ಮಾಡುವುದು ಮುಖ್ಯ ಸಾಧನವಾಗಿದೆ. ಇಡೀ ದಿನ ಈ ಆತ್ಮಿಕ ದೃಷ್ಟಿ, ಸ್ಮೃತಿ ಎಷ್ಟಿರುತ್ತದೆಯೆಂದು ಎಂದಾದರೂ ಗಮನಿಸಿದ್ದೀರಾ? ಈ ಸ್ಥಿತಿಯ ಪರೀಕ್ಷೆಯನ್ನು ಸೇವೆಯ ಫಲಿತಾಂಶದಿಂದಲೂ ನೋಡಬಹುದು. ಈ ಸ್ಥಿತಿ ದೀಪವಾಗಿದೆ. ದೀಪದ ಹತ್ತಿರಕ್ಕೆ ದೀಪದ ಹುಳು ಇಚ್ಛೆಯಿಲ್ಲದಿದ್ದರೂ ಬರುತ್ತವೆ.

ತಾವೆಲ್ಲರೂ ಶಿಕ್ಷಕರಾಗಿದ್ದೀರಿ. ಶಿಕ್ಷಕರಿಂದ ಮತ್ತೆ ಏನಾಗಲು ಭಟ್ಟಿಯಲ್ಲಿಬಂದಿರುವಿರಿ? ತಾವೆಲ್ಲ ಬಹಳ ಯೋಚಿಸುತ್ತಿರುವಿರಿ ಆದರೆ ಅದು ಬಹಳ ಸಹಜವಾಗಿದೆ. ತಮ್ಮ ಸಮಾನ ಮಾಡಲು ಕರೆಯಲಾಗಿದೆ. ತಮ್ಮ ಸಮಾನವೆಂದರೆ (ಬಿಂದು) ಝೀರೋ ಮಾಡಲು. ಝೀರೋದಲ್ಲಿ ಬೀಜ ಅಥವಾ ಬಿಂದುವೂ ಬರುತ್ತದೆ ಮತ್ತು ಎಂತಹದೇ ರೀತಿಯ ಕರ್ಮಗಳಾದರೆ ಅವುಗಳನ್ನೂ ನಿಶೇಷ (ಝೀರೋ) ಮಾಡಬೇಕು. ಆದ್ದರಿಂದ ವಿಶೇಷವಾಗಿ ತಂದೆಯನ್ನು (ಝೀರೋವನ್ನು) ನೆನಪು ಮಾಡಲು ಕರೆಯಲಾಗಿದೆ. ಶಿಕ್ಷಕನ ರೂಪವಂತೂ ಬಹಳ ದೊಡ್ಡದಿದೆ ಆದರೆ ಬಹಳ ಸಣ್ಣದಾಗಿಸಲು ಬಂದಿದ್ದೇನೆ. ಎಲ್ಲದಕ್ಕಿಂತಲೂ ಸಣ್ಣ ರೂಪ ತಂದೆಯದು ಮತ್ತು ತಮ್ಮೆಲ್ಲರದು. ಆದ್ದರಿಂದ ಈಗ ಬಿಂದುವನ್ನು (ಝೀರೋವನ್ನು) ನೆನಪಿಟ್ಟುಕೊಂಡರೆ ಮಹಾನಾಯಕ (ಹೀರೋ) ಆಗುವಿರಿ. ಅಂತಹವರು ಮಹಾನಾಯಕ ಮತ್ತು ಬಾಪ್ ದಾದಾ ಅವರಿಗೆ ಪ್ರಿಯರೂ ಆಗುತ್ತಾರೆ. ವಜ್ರಕ್ಕೆ "ಹೀರಾ" ಎಂದು ಮತ್ತು ಮುಖ್ಯನಟನಿಗೆ "ಹೀರೋ" ಎಂದು ಹೇಳುತ್ತಾರೆ. ಆದ್ದರಿಂದ ಏಕೆ ಕರೆಯಲಾಗಿತ್ತು ಎಂದು ಈಗ ತಿಳಿಯಿತೇ? ಕೇವಲ ಬಿಂದು (ಝೀರೋ) ಮತ್ತು ಮಹಾನಾಯಕ (ಹೀರೋ) ಎಂಬ ಎರಡು ಅಕ್ಷರಗಳನ್ನು ನೆನಪಿಟ್ಟುಕೊಳ್ಳಲು ಕರೆಯಲಾಗಿತ್ತು. ಈ ಎರಡು ಮಾತುಗಳನ್ನು ನೆನಪಿಟ್ಟುಕೊಂಡರೆ ತಂದೆಯ ಸಮಾನ ಸರ್ವ ಗುಣಗಳಿಂದ ಸಂಪನ್ನರಾಗುವಿರಿ. ವಿಸ್ತಾರವನ್ನು ಸಮಾವೇಶಗೊಳಿಸಲಾಗುತ್ತದೆಯಲ್ಲವೇ? 15 ದಿನಗಳು ಬಹಳ ಅಧ್ಯಯನ ಮಾಡಿದಿರಿ, ಬಹಳ ನೋಟ್ ಪುಸ್ತಕಗಳು ತುಂಬಿರುವವು. ಬಾಪ್ ದಾದಾರವರು ಮತ್ತೊಮ್ಮೆ ತಮಗೆ ವಿಸ್ತಾರವನ್ನು ಸಾರದಲ್ಲಿ ತಿಳಿಸುತ್ತಿದ್ದಾರೆ. ಬೇರೆ ಎಲ್ಲವೂ ಮರೆತರೂ ಇದನ್ನು ಮರೆಯಬೇಡಿ? ಇದನ್ನು ನೆನಪಿಟ್ಟುಕೊಳ್ಳಿ. ಆಗ ಸೇವೆಯಲ್ಲಿ ಎಷ್ಟು ಬೇಗನೆ ಪರಿವರ್ತನೆ ಬರುವುದೆಂದು ನೋಡಿ. ನಿಮ್ಮೆಲ್ಲರ ಕೋರಿಕೆ

ಇದೇ ಆಗಿದೆ - ನಾವು ಕೂಡ ಪರಿವರ್ತನೆ ಆಗಬೇಕು ಮತ್ತು ಸಮಯ ಕೂಡ ಪರಿವರ್ತನೆಯಾಗಬೇಕು. ನಮ್ಮ ಮನೆಗೆ ಹಿಂತಿರುಗಿ ಹೋಗಬೇಕು. ಮನೆಗೆ ಹೋಗಬೇಕು ಎಂಬ ಆಸೆ ಇದ್ದರೆ ಈ ಎರಡು ವಿಷಯಗಳನ್ನು ಸ್ಮೃತಿಯಲ್ಲಿ ಇಡಿ ಆಗ ಲೋಪಗಳಿಗೆ ಬದಲಾಗಿ ಅದ್ಭುತವನ್ನು ಮಾಡಿ ತೋರಿಸುವಿರಿ. ಲೋಪಗಳು ಸಮಾಪ್ತಿಯಾಗಿ ಬಿಡುತ್ತವೆ ಎಲ್ಲಿ ನೋಡಿದರೂ ಕೇಳಿದರು ಆಗ ಅದ್ಭುತವೇ ಅದ್ಭುತವನ್ನು ನೋಡುತ್ತೀರಿ ಆದ್ದರಿಂದ ಈಗ ಈ ಭಟ್ಟಿಯಿಂದ ಏನಾಗಿ ಹೋಗುವಿರಿ? ಬಿಂದು (ಝೀರೋ), ಬಿಂದುವಿನಲ್ಲಿ ಯಾವ ಮಾತೇ ಇರುವುದಿಲ್ಲ. ಹಳೆಯ ಸಂಸ್ಕಾರವಿಲ್ಲ. ಇಲ್ಲಿ ಬಿಡಲು ಬಂದಿದ್ದೀರಿ, ಏನನ್ನು ಬಿಡಬೇಕಿತ್ತೋ ಅದನ್ನು ಸರಿಯಾಗಿ ಬಿಟ್ಟು ಹೋಗುತ್ತಿರುವಿರೋ ಅಥವಾ ಸ್ವಲ್ಪ ಜೊತೆಗೆ ತೆಗೆದುಕೊಂಡು ಹೋಗುತ್ತಿರುವಿರೋ? ಏನನ್ನು ಬಿಟ್ಟಿರುವಿರಿ ಮತ್ತು ಎಷ್ಟು ಬಿಟ್ಟಿರುವಿರಿ? ಸ್ವಲ್ಪ ಸಮಯಕ್ಕಾಗಿಯೇ ಅಥವಾ ಸದಾ ಕಾಲಕ್ಕಾಗಿ ಬಿಡುತ್ತಿರುವಿರೇ ಇದನ್ನೂ ನೋಡಬೇಕು. ***ಸಂಘಟನೆಯ ಶಕ್ತಿಯಲ್ಲಿ ಬಿಟ್ಟಿರುವಿರಾ ಅಥವಾ ಸ್ವಯಂನ ಶಕ್ತಿಯಿಂದ ಬಿಟ್ಟಿರುವಿರಾ? ಸಂಘಟನೆಯ ಶಕ್ತಿ ಆಸರೆಯನ್ನು ಕೊಡುತ್ತದೆ ಆದರೆ ಇದರೊಂದಿಗೆ ಸ್ವಯಂನ ಶಕ್ತಿಯೂ ಬೇಕು. ಆಗಲೇ ಏನನ್ನು ಬಿಟ್ಟಿರುವಿರೋ ಅದು ಸದಾಕಾಲಕ್ಕಾಗಿರುತ್ತದೆ.***

ಬಾಪ್ ದಾದರವರಿಗಂತೂ ಎಲ್ಲರೂ ಪ್ರಿಯರಾಗಿದ್ದಾರೆ. ಏಕೆಂದರೆ ತಂದೆಯು ಮಕ್ಕಳಾದ ನಿಮ್ಮ ಸಹಾಯದಿಂದ ಕಾರ್ಯವನ್ನು ಮಾಡುತ್ತಿದ್ದಾರೆ. ಕಾರ್ಯದಲ್ಲಿ ಸಹಾಯಕಾರಿಯಾಗುವವರು ಪ್ರಿವಾಗಿಯೇ ಇರುತ್ತಾರೆ. ಆದರೆ ಸಹಾಯದೊಂದಿಗೆ ಸಾಹಸವನ್ನೂ ಇಡಬೇಕು. ಸಾಹಸವಿದ್ದರೆ ಸಹಯೋಗ ಅವಶ್ಯವಾಗಿ ಸಿಗುತ್ತದೆ. ಆದ್ದರಿಂದ ಸಹಯೋಗದ ಜೊತೆಗೆ ಸಾಹಸಿಗಳಾಗಿ. ಸಣ್ಣಪುಟ್ಟ ಮಾತುಗಳಲ್ಲಿ ಸಾಹಸಹೀನರಾಗಬೇಡಿ. ಸಾಹಸಿಗಳಾಗುವುದರಿಂದ ತಮ್ಮೆಲ್ಲರ ಇಚ್ಛೆ ಪೂರ್ಣವಾಗುವುದು. ಈಗ ಸಾಹಸದ ಅವಶ್ಯಕತೆಯಿದೆ. ಪ್ರತಿ ಸಮಯ, ಪ್ರತಿಯೊಂದು ಹೆಜ್ಜೆಯಲ್ಲಿ, ಪ್ರತಿ ಸಂಕಲ್ಪದಲ್ಲಿ ಬಲಿಹಾರಿಗಳಾಗುವುದರಿಂದ ಸಾಹಸ ಬರುವುದು, ಯಾರು ಬಲಿಹಾರಿಗಳಾಗುತ್ತಾರೋ ಅವರಲ್ಲಿ ಸಾಹಸ ಹೆಚ್ಚು ಇರುತ್ತದೆ. ಆದ್ದರಿಂದ ಎಷ್ಟೆಷ್ಟು ತಮ್ಮನ್ನು ತಾವು ಬಲಿಹಾರಿಗಳನ್ನಾಗಿ ಮಾಡಿಕೊಳ್ಳುವಿರೋ ಅಷ್ಟೇ ಕೊರಳ ಮಾಲೆಯಲ್ಲಿ ಸಮೀಪ ಬರುವಿರಿ, ಈಗ ಬಲಿಹಾರಿಗಳಾಗುವಿರಿ ನಂತರ ಪ್ರಭುವಿನ ಕೊರಳ ಹಾರವಾಗುವಿರಿ. ಒಂದು ವೇಳೆ ಬಲಿಹಾರಿಗಳಾಗಿ ಕರ್ಮ ಮಾಡಿದರೆ ಬೇರೆಯವರನ್ನೂ ಬಲಿಹಾರಿಗಳನ್ನಾಗಿ ಮಾಡುವಿರಿ, ಅವರನ್ನೇ ವಾರಸುದಾರರು ಎಂದು ಹೇಳಲಾಗುತ್ತದೆ. ಈಗ ಬಹಳ ಪ್ರಜೆಗಳಾಗುತ್ತಾರೆ, ವಾರಸುದಾರರು ಕಡಿಮೆಯಾಗಿದ್ದಾರೆ. ಎಷ್ಟು ಹೆಚ್ಚು ವಾರಸುದಾರರನ್ನು ತಯಾರು ಮಾಡುತ್ತೀರೋ ಅಷ್ಟು ಸಮೀಪದಲ್ಲಿ ಬರುವಿರಿ. ಆದ್ದರಿಂದ ವಾರಸುದಾರರನ್ನು ಮಾಡುವ ಯೋಜನೆಗಳನ್ನು ಮಾಡಿ, ಒಳ್ಳೆಯದು.

ಅವ್ಯಕ್ತ ಮುರಳಿ 19-07-1969.

***ಝೀರೊ(ಬಿಂದು) ಮತ್ತು ಹೀರೋ(ಮಹಾ ನಾಯಕ) ಆಗಿರಿ.***

ಆತ್ಮಿಕ ಸ್ಥಿತಿಯಲ್ಲಿ ಇದ್ದು ಮನನ-ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಶಾಂತ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಶಿವಶಕ್ತಿ ಕಂಬೈನ್ಡ್ ಸ್ವರೂಪ.

2. ನಾನು ಎಲ್ಲರ ಪ್ರತಿ ಆತ್ಮಿಕ ದೃಷ್ಟಿಯನ್ನಿಡುವ ಮರ್ಯಾದಾ ಪುರುಷೋತ್ತಮನು (ಅ.ಮು 24-04-1983 ನಾನು ಕೂಡ ಶ್ರೇಷ್ಠ ಆತ್ಮ, ಇವರು ಕೂಡ ಶ್ರೇಷ್ಠ ತಂದೆಯ ಶ್ರೇಷ್ಠ ಆತ್ಮರು. ವೆರೈಟಿ ಆತ್ಮರು ವೆರೈಟಿ ಪಾತ್ರವನ್ನು ಅಭಿನಯಿಸುತ್ತಿದ್ದಾರೆ).

3. ನಾನು ಝೀರೋ(ಬಿಂದು) ಮತ್ತು ಹೀರೋ(ಮಹಾನಾಯಕ) ಪಾತ್ರಧಾರಿ.

4. ನಾನು ತಂದೆಯ ಸಮಾನ ಸರ್ವಗುಣ ಸಂಪನ್ನ ಸ್ವರೂಪ.

5. ನಾನು ನನ್ನ ಸ್ವಶಕ್ತಿಯಿಂದ ಹಿಂದಿನ ಸಂಸ್ಕಾರಗಳನ್ನು ಸದಾ ಕಾಲಕ್ಕಾಗಿ ಸಮಾಪ್ತಿ ಮಾಡಿದ್ದೇನೆ.

6. ನಾನು ಸಾಹಸದಿಂದ ಸಹಯೋಗವನ್ನು ಪಡೆಯುವ ಬಲಿಹಾರಿ.

7. ನಾನು ಸದಾ ಬಲಿಹಾರಿಯಾಗಿ ಕರ್ಮವನ್ನಾಚರಿಸಿ, ವಾರಸುದಾರರನ್ನು ತಯಾರು ಮಾಡಿದ್ದೇನೆ.